# ಪತ್ರಿಕಾ ಪ್ರಕಟಣೆ

## ಸ್ಕ್ರಾಪ್ ಸರಕಿನ ನಕಲಿ ವಹಿವಾಟು ನಡೆಸುತ್ತಿರುವ ಜಾಲದ ತೆರಿಗೆ ವಂಚಕರನ್ನು ಬಂಧಿಸಿ, ವಂಚನೆ ಹಣದ ಜಾಡನ್ನು ಪತ್ತೆ ಹಚ್ಚಿದ ವಾಣಿಜ್ಯ ತೆರಿಗೆ ಇಲಾಖೆ

ಕರ್ನಾಟಕ ರಾಜ್ಯದ ವಾಣಿಜ್ಯ ತೆರಿಗೆ ಇಲಾಖೆಯ ವಿಶೇಷ ತಂಡವು ತನ್ನ ನಿರಂತರ ಕಾರ್ಯಾಚರಣೆಯನ್ನು ಮುಂದುವರಿಸಿ, ಸ್ಕ್ರಾಪ್ ಸರಕುಗಳ ನಕಲಿ ವಹಿವಾಟಿನ ಜಾಲವನ್ನು ಭೇದಿಸಿ, ತೆರಿಗೆ ವಂಚನೆಯಲ್ಲಿ ಭಾಗಿಯಾಗಿದ್ದ ನಾಲ್ಕು ವಂಚಕರನ್ನು ಇದುವರೆಗೆ ಬಂಧಿಸಿದೆ. ಈ ಪ್ರಕ್ರಿಯೆಯಿಂದ, ಖೊಟ್ಟಿ ಹೂಡುವಳಿ ತೆರಿಗೆ ಜಾಲದ ಸುಮಾರು ನೂರಕ್ಕೂ ಹೆಚ್ಚು ಸಂಸ್ಥೆಗಳ ವಹಿವಾಟುಗಳನ್ನು ನಿಗ್ರಹಿಸಲಾಗಿದ್ದು, ಸುಮಾರು ರೂ. 1008 ಕೋಟಿಗಳ ವಹಿವಾಟು ಮತ್ತು ರೂ. 180 ಕೋಟಿಗಳಷ್ಟು ತೆರಿಗೆ ಮೊತ್ತವನ್ನು ಪತ್ತೆ ಹಚ್ಚಿದೆ.

ಮೊದಲಿಗೆ, ತೆರಿಗೆ ವಂಚನೆಯ ಜಾಲದ ಸೂತ್ರಧಾರಿ ಹಾಗೂ ಮುಖ್ಯ ಆರೋಪಿಯಾದ ಶ್ರೀ ಮೊಹಮ್ಮದ್ ಸಿದ್ದೀಕ್ ಇವನನ್ನು ದಿನಾಂಕ: 17-01-2024 ರಂದು ಬಂಧಿಸಲಾಯಿತು. ಎರಡನೇ ಆರೋಪಿ ಹಾಗೂ ಸೂತ್ರಧಾರನ ನಿಕಟವರ್ತಿಯಾದ ಶ್ರೀ ಇಂತಿಯಾಜ್, ಬಂಟ್ವಾಳ ಇವನನ್ನು ದಿನಾಂಕ: 22-01-2024 ರಂದು ಬಂಧಿಸಲಾಯಿತು. ತದನಂತರ, ಸೂತ್ರಧಾರಿಯ ಪಾಲುದಾರ ಹಾಗೂ ಮೂರನೇ ಆರೋಪಿ ಶ್ರೀ ಸಮೀರ್‌ಪಾಷ ಇವನನ್ನು ದಿನಾಂಕ: 08-02-2024 ರಂದು ಬಂಧಿಸಲಾಯಿತು.

ಈ ಪ್ರಕರಣದ 4ನೇ ಆರೋಪಿ ಮತ್ತು ವಂಚನೆ ಜಾಲದ ನಿಕಟ ಸಹವರ್ತಿ ಶ್ರೀ ಸೋನಿ ವಿಶ್ವಾಸ್ ಒಂದು ತಿಂಗಳ ಕಾಲ ತಲೆಮರೆಸಿಕೊಂಡಿದ್ದ. ಆರೋಪಿಯು ನಿರಂತರವಾಗಿ ಸ್ಥಳಗಳನ್ನು ಬದಲಾಯಿಸುತ್ತಿದ್ದ ಹಾಗೂ ತನ್ನ ಪರಿಚಯಸ್ಥರ ಸಹಾಯದಿಂದ ಅನೇಕ ಮೊಬೈಲ್ ಸಿಮ್ ಕಾರ್ಡ್‌ಗಳನ್ನು ಪಡೆದಿರುತ್ತಾನೆ. ವಿಶ್ವಾಸನೀಯ ಮೂಲಗಳ ಮಾಹಿತಿಯ ಆಧಾರದ ಮೇಲೆ ಕಲ್ಬುರ್ಗಿ, ಹುಬ್ಬಳ್ಳಿ, ಬಳ್ಳಾರಿ ಮತ್ತು ಮಲೆನಾಡು ವಿಭಾಗಗಳ ಅಧಿಕಾರಿಗಳ ತಂಡಗಳು ಮಾರುವೇಷದಲ್ಲಿ 24 ಗಂಟೆಗಳ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಪತ್ತೆಹಚ್ಚಿ ಅಂತಿಮವಾಗಿ ದಿನಾಂಕ:23.02.2024 ರಂದು ಬಂಧಿಸಿರುತ್ತಾರೆ. ಈ ಕಾರ್ಯಾಚರಣೆಯಲ್ಲಿ ಕರ್ನಾಟಕ ಪೊಲೀಸ್, ರೈಲ್ವೆ ಮತ್ತು ಮಹಾರಾಷ್ಟ್ರದ ಜಿ.ಎಸ್.ಟಿ. ಅಧಿಕಾರಿಗಳು ಸಹಕರಿಸಿರುತ್ತಾರೆ.

ಮೇಲೆ ಹೇಳಿದ ಆರೋಪಿಗಳು ಕೇರಳ, ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳಲ್ಲಿ ನಕಲಿ ದಾಖಲೆಗಳ ಆಧಾರದ ಮೇಲೆ ಅನೇಕ ಬೋಗಸ್ ಜಿ.ಎಸ್.ಟಿ. ನೋಂದಣಿಗಳನ್ನು ಸೃಜಿಸಿ, ನೂರಾರು ಕೋಟಿ ರೂಪಾಯಿಗಳ ವ್ಯವಹಾರವನ್ನು ನಡೆಸಿದ್ದಾಗಿ ಹಲವಾರು ಹಂತದ ನೊಂದಣಿಗಳ ಮುಖಾಂತರ ದಾಖಲಿಸಿ, ಮೊದಲ ಹಂತದಲ್ಲಿ ಯಾವುದೇ ತೆರಿಗೆಯನ್ನು ಸರ್ಕಾರದ ಬೊಕ್ಕಸಕ್ಕೆ ಪಾವತಿಸದೆ, ಕೆಲ ಫಲಾನುಭವಿ ಸಂಸ್ಥೆಗಳಿಗೆ ಹೂಡುವಳಿ ತೆರಿಗೆಗಳನ್ನು ಪಡೆದುಕೊಳ್ಳಲು ಅನುವು ಮಾಡಿಕೊಟ್ಟು ತೆರಿಗೆ ವಂಚನೆಯನ್ನು ಮಾಡಿರುತ್ತಾರೆ.

ಈ ಆರೋಪಿಗಳು, ತಮ್ಮ ಸ್ನೇಹಿತರ, ಅಮಾಯಕರ ಮತ್ತು ಬಡಜನರ ಪ್ಯಾನ್ ಹಾಗೂ ಆಧಾರ್ ದಾಖಲೆಗಳನ್ನು ಬಳಸಿಕೊಂಡು, ಜಿ.ಎಸ್.ಟಿ ನೋಂದಣಿ ಪಡೆಯಲು ಅನುವಾಗುವ ಬಾಡಿಗೆ ಕರಾರು ಪತ್ರಗಳನ್ನು ಸಿದ್ದಪಡಿಸಿರುತ್ತಾರೆ. ಈ ಜಿ.ಎಸ್.ಟಿ. ನೋಂದಣಿ ಸಂಖ್ಯೆಗಳನ್ನು ಬಳಸಿಕೊಂಡು 6 ರಿಂದ 12 ತಿಂಗಳುಗಳಲ್ಲಿ ಕೋಟ್ಯಾಂತರ ರೂಪಾಯಿಗಳ ವಹಿವಾಟುಗಳನ್ನು ದಾಖಲಿಸಿ, ಅಂತಿಮವಾಗಿ ಯಾವುದೇ ತೆರಿಗೆ ಪಾವತಿಸದೆ ತಮ್ಮ ವ್ಯಾಪಾರ ಸಂಸ್ಥೆಗಳನ್ನು ಮುಚ್ಚಿರುತ್ತಾರೆ.

ಈ ತೆರಿಗೆ ವಂಚನೆಯ ಹಣವನ್ನು National Payment Corporation of India ದ "Retail Payment and Settlement System" ಮೂಲಕ ಖಾತೆಯ ಹಣವನ್ನು ನಗದಾಗಿ ಪರಿವರ್ತಿಸುವ ನವೀನ ವಿಧಾನವನ್ನು ಬಳಸಿರುತ್ತಾರೆ. ಬ್ಯಾಂಕ್‌ಗಳು ಮತ್ತು ಫಿನ್‌ಟೆಕ್ ಕಂಪನಿಗಳು ನಿಯುಕ್ತಿಗೊಳಿಸಿದ Business Correspondents ರವರುಗಳ ಮೂಲಕ ಇದುವರೆವಿಗೂ ರೂ.140 ಕೋಟಿಗಳ ವಂಚಿತ ಮೊತ್ತವನ್ನು ನಗದಾಗಿ ಪರಿವರ್ತಿಸಿಕೊಂಡಿರುವುದನ್ನು ತನಿಖೆಯ ಸಮಯದಲ್ಲಿ ಪತ್ತೆ ಹಚ್ಚಲಾಗಿರುತ್ತದೆ.

ಇಲಾಖೆಯ ಅಧಿಕಾರಿಗಳು ಈ ಪ್ರಕರಣಗಳ ತನಿಖೆಯನ್ನು ಮುಂದುವರಿಸಿದ್ದು, ಸಮಗ್ರ ವಿಶ್ಲೇಷಣೆಯನ್ನು ನಡೆಸುತ್ತಿರುತ್ತಾರೆ. ವಾಣಿಜ್ಯ ತೆರಿಗೆ ಇಲಾಖೆಯ ಈ ದೃಢವಾದ ಕ್ರಮವು ಕಾನೂನಿನ ನಿಯಮಗಳನ್ನು ಎತ್ತಿಹಿಡಿಯಲು, ತೆರಿಗೆ ಸಮಾನತೆಯನ್ನು ಖಾತ್ರಿಪಡಿಸಲು ಮತ್ತು ರಾಜ್ಯದ ಪ್ರಾಮಾಣಿಕ ತೆರಿಗೆ ಪಾವತಿದಾರರ ಹಿತಾಸಕ್ತಿಗಳನ್ನು ರಕ್ಷಿಸುವ ಸರ್ಕಾರದ ಅಚಲ ಬದ್ಧತೆಯ ಬಗ್ಗೆ ಸ್ಪಷ್ಟ ಸಂದೇಶವನ್ನು ರವಾನಿಸುತ್ತದೆ.

ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ) ಬೆಂಗಳೂರು